ಮೈಸೂರ ಗಿಜಿಟ.

ಸಂ. XXXVIII] ಸರ್ಕಾರದಿಂದ ಪ್ರಾಮಿಷ್ ಆದ್ದು. [ನಂ 8.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 26, ಸನ್ 1903.

IIನೇ ಭಾಗ.

ಇಂಡಸ್ಟ್ರಿಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 5ನೇ ಫೆಬ್ರವರಿ 1903, ಮೊಕ್ಕಾಂ ಮುಗವಾಳ.

ದೊಡ್ಡಬಳ್ಳಾಪುರದ ತಾ|| ರಾಜಗಟ್ಟದ ಹೋಬಳಿ ಗೊಳ್ಳ-ನಂದಿಗುಂದ ದೇವನಹಳ್ಳಿ ತಾ|| ಅವತಿ ಹೋ|| ಕಾರಹಳ್ಳಿ, ಈ ಗ್ರಾಮಗಳ ಜಮೀನುಗಳು ಸ್ಟೇಟ್ ಫಾರೆಸ್ಟ್ಗೆ ದಾಖಲ್ ಮಾಡಿಕೊಳ್ಳತಕ್ಕ ಖಾಜಿ ಫಾರೆಸ್ಟ್ ಇಲಾಖೆ ಮೂರಿಫತ್ತು ಇಸ್ತಿಹಾರ್ ಗೆಜೆಟಿನಲ್ಲಿ ಫಾಯಿಷಾಗಿ ಇದರ ವೆವಸ್ಥೆಬಗ್ಯೆ ನಮ್ಮನ್ನು ನೇಮಕ ಮಾಡಿರುವಂತೆ 1902ನೇ ಇಸವಿ ಅಕ್ಟೋಬರ್ 3ನೇ ಮತ್ತು ಂ 245–1740ನೇ ನಂಬರು ನೋಟಿಫಿಕೇರ್ಷ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಗೊಳ್ಳ–ನಂದಿಗುಂದ ಗ್ರಾಮದ ಸರ್ವೆ 24—25, ಕಾರಹಳ್ಳಿ ಗ್ರಾಮದ ಸರ್ವೆ 199 ಈ ನಂಬರುಗಳು ಹಾಲಿ ಜಾರೀಲಿ ಇರುವ ದಿಬ್ಬಗಿರಿ ಬೆಟ್ಟದ ಸ್ಟೇಟ್ ಫಾರೆಸ್ಟ್ಗೆ ಸೇರಿಸಿಕೊಳ್ಳುವದು ಅವಶ್ಯಕ ಇರುವದ್ದರಿಂದ ಫಾರೆಸ್ಟ್ ರೆಗ್ಯುಲೇರ್ಷ 5ನೇ ಸೆಕ್ಷರ್ಷ ಅನುಸರಿಸಿ ಈ ಜಮೀನುಗಳ ಯಾವ ಹಕ್ಕುದಾರಿಯನ್ನಾದರೂ ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕುದಾರು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಬಂದು ಬರಹ ಮೂಲಕವಾದ ನೋಟಿಸನ್ನು ಇಸ್ತಿಹಾರು ಗೆಜೆಟಿನಲ್ಲಿ ಫಾಯಿಷಾದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ವಳಗಾಗಿ ನಮ್ಮಲ್ಲಿ ಹಾಜರ್ಮಾಡಬೇಕು ಅಥವಾ ಆ ವಾಯಿದೆ ಅಂದರು ವಾರು ನಮ್ಮ ರೂಬರೂಬ್ ಹಾಜರಾಗಿ ಬರ್ಖಾ ಮಾಡಬೇಕು.

ಸ್ಟೇಟ್ ಫಾರೆಸ್ಟ್ಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಮತ್ತು ದನಕರುಗಳು ಪ್ರವೇಶ ಮಾಡಲು ನಿರ್ಬಂಧವುಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಆದಕಾರಣ ವಾಯಿದೆ ಕಳದುಬರುವ ತಕರಾರುಗಳನ್ನು ಅಂಗೀಕರಿಸಲ್ಪಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇರ್ಷ 6ನೇ ಸೆಕ್ಷರ್ಷ ಅನುಸರಿಸಿ ತಿಳಿಯಪಡಿಸುವದೇನಂದರೆ—

ಸ್ಟೇಟ್ ಫಾರೆಸ್ಟ್ ಆಗಿರಬೇಕೆಂದು ಮೊಕರರ್ರಾಡುವ ಇಸ್ತಿಹಾರ್ನಿಂದ ಗೊತ್ತಾಗುವ ತಾರೀಖಿಗೂ ಈ ಇಸ್ತಿಹಾರ್ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನ್ ಅಥವಾ ಅದರ ಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಅಪ್ಪಣೆ ಶಿವಾಯಿ ಸಂಪಾದಿಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗೈರೆ ಕಟ್ಟಕೂಡದು ಎಂದು ಇದರಿಂದ ಎಲ್ಲರಿಗೂ ತಿಳಿಯಪಡಿಸಿ ಇಧೆ.

ಡಿ. ಎಂ. ನರಸಿಂಗರಾವ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 16ನೇ ಫೆಬ್ರವರಿ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೆ ತಿಳಿಯುವಡಿಸುವದೇನಂದರೆ : ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸುಪೇಟೆ ರೇಂಜಿಗೆ ಸೇರಿದ ಹಂದಿಗೊಂದಿ ಮತ್ತು ಹುಲತಾರ ಸ್ಟೇಟ್ ಫಾರೆಸ್ಟುಗಳಲ್ಲಿ ಗುತ್ತು ಮಾಡಿರುವ ಈ ಕೆಳಗೆ ನಮೂದು ಆಗುವ ಕೂಪುಗಳಲ್ಲಿ ಸಾಧೆಯನ್ನು ಈ ಕೆಳಗಣ ಷರತ್ತುಗಳಿಗೆ ವಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಮಾರ್ಚ್ 7ನೇ ತಾರೀಖು ದಿವಸ ಬಿಡದಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

ಫಾರೆಸ್ಟ್ ಹೆಸರು.	ಕೂಪು ನಂಬರು.	ಕೂಪುಗಳ ನಂಬರು.	ಸುಮಾರು ಏನೀ ಎಕರೆ ಗಳಲ್ಲಿ.	ಕಡಿಯತಕ್ಕ ಮರಗಳ ಜಾತಿ.	ಒಂದು ಎಕರೆಗೆ ಸುಮಾರು ಸಿಕ್ಕಬಹುದಾದ ಮೊತ್ತ.	ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಷರಾ.
ಹಂದಿಗೊಂದಿ ಸ್ಟೇಟ್ ಫಾರೆಸ್ಟ್	I	1	130	ಚುಜ್ಜಲು, ಹುಲಪೆ, ಈಜಿ, ಪಜಾರಿ, ಹೆಸರೆ, ಹುರಗಲು, ಕಗ್ಗಲಿ, ದೇವದಾರು, ತೂಪರೆ, ಚನ್ನಂಗಿ, ಗೊರವಿ, ನೀಲಾಜಿ, ದಿಂಡಿಗ, ಹಾಲೆ, ಆಲಜಗಳ ಗಂಟು, ಮೂಕರತಿ ವಗೈರ	ಎಕರೆ ಬಂದಕ್ಕೆ ಸುಮಾರು 1¾ ಟರ್	ಬಿಡದಿ ಸ್ಟೇಷನ್‌ಗೆ 3ರ ಲಾಗಾಯತು 4 ಮೈಲಿ ವರಿಗೆ	ಕೂಪಿನ ಎರಡು ಭಾಗದಲ್ಲೂ ವಿಧಾಯಕವಾದ ಪಾಕಾದ ಲೈನ್ ಇರುತ್ತೆ. ಬಾಕಿ ಎರಡು ಕಡೆ ನಾಲಾಗಳು ನೀರು ಹರಿಯುವ ಸ್ಥಳಗಳು ಜಕ್ಕು ಬಂದಿಯಾಗಿಧೆ. ಸಾಧಾರಣವಾಗಿ ಮಟ್ಟುವಾದ ಫಾರೆಸ್ಟು
ಡಿಟೋ	II	1	200	ಡಿಟೋ	ಡಿಟೋ 2½ ಟರ್	ಬಿಡದಿ ಸ್ಟೇಷನ್‌ಗೆ 6ರ ಲಾ॥ 7 ಮೈಲಿ ವರಿಗೆ ಫಾಸಲೆ	ಮೂರು ಕಡೆಯಲ್ಲಿಯೂ ಪಾಕಾದ ಲೈನು 4ನೇ ಕಡೆ ಭಂಡಿ ರಸ್ತೆ ಇರುವ ಬಟ್ಟದ ವಾರಡಿ. ಅರ್ಧ ಫಾರೆಸ್ಟು ಬೆಟ್ಟ ಕಾಡು, ಉಳಿದ ಬಾಕಿ ಅರ್ಧ ಮಟ್ಟ ಭೂಮಿಯಾಗಿಧೆ
ಡಿಟೋ	III	1	80	ಡಿಟೋ	ಡಿಟೋ	ಡಿಟೋ	ಕೂಪು ಯಾವತ್ತು ಮಟ್ಟ ಭೂಮಿವುಳ್ಳ ಫಾರೆಸ್ಟು
ಹುಲತಾರು ಸ್ಟೇಟ್ ಫಾರೆಸ್ಟ್	I	1	130	ಡಿಟೋ	ಎಕರೆ ಬಂದಕ್ಕೆ ಸುಮಾರು 1¾ ಟರ್	ಡಿಟೋ	ಕೂಪಿನ ಮೂರು ಭಾಗದಲ್ಲೆಯೂ ಡಿವಾರಿಕೇರ್ಡ್ ಲೈನ್ ಇರುತ್ತೆ. ಮತ್ತೊಂದು ಕಡೆ ಬಂದು ನಾಲಾ ಮತ್ತು ಬಂದು ಫರಲಾಂಗು ವರಿಗೆ ಪಾಕಾದ ಲೈನ್. ಸುಮಾರಾಗಿ ಕೂಪು ಎಲ್ಲಾ ಬೆಟ್ಟ ಕಾಡಾಗಿಧೆ
ಡಿಟೋ	II	1	140	ಡಿಟೋ	ಎಕರೆ ಬಂದಕ್ಕೆ ಸುಮಾರು 2 ಟರ್‌ಗಳು	2ರ ಲಾ॥ 3 ಮೈಲಿ ಫಾಸಲೆ	ಕೂಪಿನ ಮೂರು ಕಡೆಯಲ್ಲೂ ಪಾಕಾದ ಲೈನ್ ಇರುತ್ತೆ. ಮತ್ತೊಂದು ಕಡೆ ಹುಲತಾರು ಗುಡ್ಡದ ಭಾಗ ⅔ನೇ ಭಾಗ ಮಟ್ಟವಾಗಿಧೆ. ⅓ ಬೆಟ್ಟ ಕಾಡು

II. ಈ ಹರಾಜು ಫಾರೆಸ್ಟ್ ಕ್ವಾರ್ಟರ್ ಸಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

III. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕೈಮ ನಡಿಸುವ ಆಫಿಸರವರಿಗೆ ಅಧಿಕಾರವಿರುತ್ತೆ.

IV. ಸವಾಲ್ದಾರನು ಸವಾಲ್ ಮಾಡುವದಕ್ಕೆ ಮುಂಚೆಯೆ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್ದಾರನ ಹೊರ್ತು ಹರಾಜು ಕೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು ಆ ಮೊಬಲಗನ್ನು ಮತ್ತು ಷರತ್ತು ಮೇರ ನಡಿಯಲು ಮಂಜೂರಾದ ಸವಾಲ್ದಾರನು ಇಡಬೇಕಾದ 25 ರೂಪಾಯಿ ಜುಮ್ಲಾ 50 ರೂಪಾಯಿಗಳನ್ನು ಗವರ್ನ್‌ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

V. ಮಂಜೂರಾದ ಸವಾಲುದಾರನು ಪ್ರತಿ ಸಾಧೆ ಮೊತ್ತ ಅಳತೆಯಾದಹಾಗೆಲ್ಲಾ ಅಂಥಾ ಸಾಧೆ ಮೊತ್ತದ ಕಿಮ್ಮತ್ತನ್ನು ಪಾವತಿ ಮಾಡಬೇಕು. ಮತ್ತು ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪು ಯಾ ಕಂಪಾರ್ಟ್‌ಮೆಂಟನ್ನು ಪುನಹಾ ಹರಾಜು ಮಾಡಿಸಲಾಗಿತ್ತು. ದುಸರಾ ಹರಾಜಿನಲ್ಲಿ ಏನಾದರೂ ಲುಕ್ಸಾನು ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿ ಕೊಡಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೆಗೆ ಈತನು ಭಾಗಿಯಾಗುವದಿಲ್ಲ.

ಷರತ್ತುಗಳು.

1. ಸಂದಲ್, ಅಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುರ್ತುಮಾಡಿರುವ ಮತ್ತು ಸೊಗಗಳು ಅಂದರೆ ಸುತ್ತು ಅಳತೆ ಬಂದು ಅಡಿ ಬಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸೌದೆಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟಾದರೆ, ಕಂಟ್ರಾಕ್ಟದಾರನು ಡಿ|| ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ಬೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಕೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಕಾಣಿಕೆ, ಅಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಕೇರಿ ಇಲ್ಲ ಉಳಿಕೆಕೊಂಡಿರುವ ಸಂದಲ್ ಅಳಲೆ ಹುಣಸೆ ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮನ್ನಾ ನೆಯಾಗಿ ಕಡೆದರೆ ಅಂಥಾದ್ದೆಲ್ಲಾ ಇಲಾಖಾ ಮೂಲಕ ಕಾಲ್ಸ್ ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಕೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸೌದೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಇಸವಿ ಜುಲೈ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟುದಾರನು ಪಾವತಿ ಮಾಡಿರುವ ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಸೌದೆ ಕತರಾವಣಿ ವ ಸಾಗಿಸತಕ್ಕ ಹಕ್ಕು ದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ.

5. ಕಂಟ್ರಾಕ್ಟುದಾರ ಖರೀದಿಮಾಡುವ ಸೌದೆ ಮೊತ್ತಕ್ಕೆ ತೀರ್ದಾದು ಆದ ದರ ಗಾಡಿ ಜೋಜಾ ಬಂದಕ್ಕೆ 34 ಸಲೆ ಅಡಿ ಅಥವಾ ಟರ್ ಬಂದಕ್ಕೆ 68 ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ಮೊಬಲಗು ಪಾವತಿ ಮಾಡಿದ ನಂತರ ರೇಂಜ್ ಫಾರೆಸ್ಟ್ ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸ್ ಕೊಡುತ್ತಾರೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನಾಕರನು ರಹದಾರಿ ಕೊಡುತ್ತಾನೆ.

6. ಕೂಪು ಯಾ ಕಂಪರ್ಟಮೆಂಟಿನಿಂದ ಸೌದೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟ ಇರುವ ಕೂಪಿನಲ್ಲಿ ಆಗಲಿ ಅಥವಾ ಸೌದೆ ಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1903ನೇ ಫಿಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನ ಕಡೆ ಜನರು ಅಜಾಗ್ರತೆಯಿಂದ ಉಂಟಾದ್ದೆಂದು ಡಿ|| ಫಾರೆಸ್ಟ್ ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

7. ಕಂಟ್ರಾಕ್ಟುದಾರನ ಕಡೆ ಗಾಡಿಯವರು ರೈಲ್ವೆ ಸ್ಟೇಷನ್‌ಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಿಡಿ ಸೌದೆಯನ್ನು ಕಡಿದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇಷನ್ ಪ್ರಕಾರ ಪ್ರಾಸಿಕ್ಯೂಷನ್‌ಗೆ ಗುರಿಮಾಡಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 29ನೇ ಜನವರಿ 1903ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ರೇಂಜ್ ಫಾರೆಸ್ಟ್ ಆಫಿಸರವರ ಲೆಕ್ಕದಲ್ಲಿ ಈ ರೇಂಜ್ ಬಾಬತು ವಾರ್ಜಿನ್ನಿನಲ್ಲಿ ಕಂಡ ಹೆಸರಿನ ನಾಕರರ ತಲಬು ರೂ. 3—11—11 ಪಾವತೀ ಇಲ್ಲದೇ ಬಾಕೀಯಲ್ಲಿರುವಂತೆ ತಿಳಿಯಬಂದಿರುತ್ತೆಯಾಗಿ ಈ ಲಾಗಾಯಿತು ಬಂದು ತಿಂಗಳು ವಾಯಿದೆಯಲ್ಲಿ ಈ ತಲಬಿಗೆ ಇರತಕ್ಕ ಹಕ್ಕನ್ನು ತಿಳಿಯಪಡಿಸದೇ ಇರುವ ಭಾಗದಲ್ಲಿ ಸದರೀ ಮೊಬಲಗನ್ನು ಸಂಕ್ಟಾರಕ್ಕೆ ಅರ್ಜ ಜಮೆಗೆ ತಂದುಕೊಳ್ಳುವದರಲ್ಲಿ ಬರುತ್ತೆ. ತಿಳಿಯುವದು.

ಹೆಸರು.	ಮಾಹೆ.	ಮೊಬಲಗು.
ಕರಿಯಾ	1902ನೇ ಆಗಸ್ಟ್	2—15—0
ನಂಜಾ	1900ನೇ ಅಕ್ಟೋಬರ್	0—12—11
	ಅಂತು ...	3—11—11

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ, ತಾರೀಖು 12ನೇ ಫೆಬ್ರವರಿ 1903.

ಕೋಲಾರ ತಾಲ್ಲೂಕಿಗೆ ಸೇರಿದ ಜೋಡಿ ಜಂಬಾಪುರ ಮತ್ತು ಜೋಡಿ ಹಾವಳಿಗವುಡನ ಹೊಸೂರು ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಆವಿುಲರವರ ಕಚೇರಿಯಲ್ಲಿ 1903ನೇ ಇಸವಿ ಏಪ್ರಿಲ್ 2ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲ್ ಬಗ್ಯೆ 1902ನೇ ಮಕ್ಕಂ 7ನೇ ನಂಬರ್ ಮೈಸೂರ ಗೆಜೆಟ್ಟಿನ 2ನೇ ಭಾಗದ 67ನೇ ನಂಬರ್ ಪೇಜು ನೋಡತಕ್ಕದ್ದು.

ಎಸ್. ಅಮೀರ್ ಹಸ್ಸೇ,
ಆಕ್ಟಿಂಗ್ ಡೆಪ್ಯೂಟಿ ಕಮಿಷನರ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ವಿ|| ಅರ್ಜೀ ನಂಬರ್ 353.

ಮೃತಪಟ್ಟ ಹೊನ್ನಮ್ಮ ಎಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಿರಂಗೂರು ಹೋಬಳಿ ಚಿಕ್ಕಡೆ ಗ್ರಾಮದಲ್ಲಿರುವ ಪುಟ್ಟೆಗೌಡನ ಮಗಳು ಹೊನ್ನಮ್ಮ, ಮೃತಪಟ್ಟ ಸದರೀ ಹೊನ್ನಮ್ಮನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೇಲ್ಕಂಡ ಚಿಕ್ಕಡೆ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಗರಡಿ ಹೊನ್ನಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.